ಅನುಬಂಧ - ೨

1992ನೇ ಫೆಬ್ರುವರಿ ತಿಂಗಳಿಗೆ ಮಂಡ್ಯ ಜಿಲ್ಲೆಗೆ ಹಂಚಿಕೆ ಮಾಡಿದ ಆಹಾರ ಧಾನ್ಯಗಳ ತಾಲ್ಲೂಕುವಾರು ವಿವರ

ಕ್ರ. ಸಂ	ತಾಲ್ಲೂಕು	ಅಕ್ಕಿ ಮೆ.ಟನ್. ಗಳಲ್ಲಿ	ಗೋಧಿ ಮೆ.ಟನ್. ಗಳಲ್ಲಿ	ಸಕ್ಕರೆ ಕ್ವಿಂಟಾಲ್ ಗಳಲ್ಲಿ	ಸೀ.ಎಣ್ಣೆ ಕೆ.ಎಲ್. ಗಳಲ್ಲಿ
1.	ಮಂಡ್ಯ	324.0	254.0	1729	156
2.	ಮದ್ದೂರು	199.2	229.2	1085	156
3.	ಮಳವಳ್ಳಿ	181.0	210.0	925	146
4.	ಪಾಂಡವಪುರ	113.4	123.4	650	110
5.	ಶ್ರೀರಂಗಪಟ್ಟಣ	133.3	143.3	665	118
6.	ಕೆ.ಆರ್.ಪೇಟೆ	124.7	124.7	790	130
7.	ನಾಗಮಂಗಲ	124.4	124.4	680	130

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ನಿರ್ವಾಹಕರ ನೇಮಕಾತಿ

239 - ಶ್ರೀ ಎಲ್.ಆರ್. ಶಿವರಾಮೇಗೌಡ (ನೆಲಮಂಗಲ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ಕ.ರಾ.ರ.ಸಾ. ಸಂಸ್ಥೆಯ ಚಾಲಕ, ನಿರ್ವಾಹಕ ನೇಮಕಾತಿಯಲ್ಲಿ ಆಗಬಹುದಾದ ಲೋಪ ದೋಷಗಳನ್ನು ತಡೆಗಟ್ಟಲು ಸರ್ಕಾರ ಏನು ಕ್ರಮ ಕೈಗೊಂಡಿದೆ?

2) ಈ ನೇಮಕಾತಿಯಲ್ಲಿ ಆಗಬಹುದಾದ ಲೋಪದೋಷಗಳನ್ನು ತಡೆಗಟ್ಟಲು ಅರ್ಹತೆ ಮತ್ತು ವಯಸ್ಸನ್ನು ಆಧಾರವಾಗಿಡಲು ಇರುವ ತೊಂದರೆ ಏನು?

3) ಗ್ರಾಮಾಂತರ ಪ್ರದೇಶದಿಂದ ಬರುವ ಅಭ್ಯರ್ಥಿಗಳಿಗೆ ಅನ್ಯಾಯವಾಗುವುದನ್ನು ತಪ್ಪಿಸಲು ಹೆಚ್ಚುವರಿ ಅಂಕಗಳನ್ನು ಕೊಡುವ ಉದ್ದೇಶ ಸರ್ಕಾರಕ್ಕಿದೆಯೇ?

ಶ್ರೀ ಅಜೀಜ್ ಸೇಠ್ (ಸಾರಿಗೆ ಸಚಿವರು):

1) ಈ ಹಿಂದೆ ನಿರ್ವಾಹಕರ ಹುದ್ದೆಗೆ 75 ಅಂಕಗಳ ಲಿಖಿತ ಪರೀಕ್ಷೆ ನಡೆಸಿ ಅದರಲ್ಲಿ ಪಡೆಯುವ ಅಂಕಗಳನ್ನು ಸಂದರ್ಶನಕ್ಕೆ ನಿಗಧಿಪಡಿಸಿದ 25 ಅಂಕಗಳಿಗೆ ಪಡೆಯುವ ಅಂಕಗಳನ್ನು ಕೊಡಿಸಿ ಒಟ್ಟು ಅಂಕಗಳ ಅರ್ಹತಾ ಕ್ರಮದ ಆಧಾರದ ಮೇಲೆ ಹುದ್ದೆಗಳ ಮೀಸಲಾತಿಯನ್ನು ಗಮನದಲ್ಲಿಟ್ಟುಕೊಂಡು ಆಯ್ಕೆ ಮಾಡಲಾಗುತ್ತಿತ್ತು. ಚಾಲಕ ಹುದ್ದೆಗೆ 75 ಅಂಕಗಳ ವೃತ್ತಿ ಪರೀಕ್ಷೆಯನ್ನು 25 ಅಂಕಗಳ ಸಂದರ್ಶನವನ್ನು ನಡೆಸಿ ಒಟ್ಟು ಅಂಕಗಳ ಆಧಾರದ ಮೇಲೆ ಅರ್ಹತಾ ಕ್ರಮದಲ್ಲಿ ಆಯ್ಕೆ ಮಾಡಲಾಗುತ್ತಿತ್ತು. ಈ ಪದ್ಧತಿಯು ಅನೇಕ ಕಡೆಗಳಿಂದ ದೂರು ಬರಲು ಅವಕಾಶವಾದ್ದರಿಂದ ಇದನ್ನು ತಪ್ಪಿಸಲು ಸಂಬಂಧಿಸಿ ನಿಯಮಾವಳಿಯನ್ನು 1991ರಲ್ಲಿ ತಿದ್ದುಪಡಿ ಮಾಡಲಾಯಿತು. ತಿದ್ದುಪಡಿಯಂತೆ ನಿರ್ವಾಹಕ ಹುದ್ದೆಗೆ ನಿಗಧಿತ ವಿದ್ಯಾರ್ಹತೆಯಲ್ಲಿ ಅಭ್ಯರ್ಥಿಯು ಪಡೆದ ಅಂಕಗಳನ್ನು 75 ಅಂಕಗಳಿಗೆ ಪರಿವರ್ತಿಸಿ ಸಂದರ್ಶನದಲ್ಲಿ 25 ಅಂಕಗಳಿಗೆ ಪಡೆಯುವ ಅಂಕಗಳನ್ನು ಕೂಡಿಸಿ ಒಟ್ಟು ಅಂಕಗಳ ಆಧಾರದ ಮೇಲೆ ಮಾಡಲಾಗುವುದು. ಚಾಲಕ ಹುದ್ದೆಗೆ 50 ಅಂಕಗಳ ವೃತ್ತಿ

ಪರೀಕ್ಷೆಯಲ್ಲಿ ಪಡೆಯುವ ಅಂಕಗಳ ಅರ್ಹತಾ ಕ್ರಮದಲ್ಲಿ ಆಯ್ಕೆ ಮಾಡಲಾಗುವುದು. ಈ ಪದ್ಧತಿಯನ್ನು ಅನುಸರಿಸುವುದರಿಂದ ಬಹುಪಾಲು ಸಂಭವಿಸುತ್ತಿದ್ದ ಲೋಪ ದೋಷಗಳನ್ನು ತಡೆಗಟ್ಟಬಹುದಾಗಿದೆ.

2) ಆಯ್ಕೆಗಳಲ್ಲಿ ವಯಸ್ಸನ್ನು ಮಾತ್ರ ಗಮನದಲ್ಲಿಟ್ಟುಕೊಂಡಲ್ಲಿ ಗುಣ ಮತ್ತು ಅರ್ಹತೆಗಳು ನಿಶ್ಚಯವಾಗುವುದಿಲ್ಲ. ಆದ್ದರಿಂದ ಆಯ್ಕೆಗಳನ್ನು ನಿರ್ವಾಹಕ ಹುದ್ದೆಗೆ ನಿಗಧಿತ ವಿದ್ಯಾರ್ಹತೆಯ ಪರೀಕ್ಷೆಯಲ್ಲಿ ಪಡೆದ ಅಂಕಗಳನ್ನು ಸಂದರ್ಶನದಲ್ಲಿ ಪಡೆಯುವ ಅಂಕಗಳೊಂದಿಗೆ ಕೂಡಿಸಿ ಅರ್ಹತಾ ಕ್ರಮದಲ್ಲಿ ಆಯ್ಕೆ ನಡೆಸಲಾಗುವುದು. ಚಾಲಕ ಹುದ್ದೆಗೆ ವೃತ್ತಿ ಪರೀಕ್ಷೆಯಲ್ಲಿ ಪಡೆದ ಅಂಕಗಳ ಆಧಾರದ ಮೇಲೆ ನೇಮಕ ಮಾಡಲಾಗುವುದು. ಸಂಸ್ಥೆಯ ಪದವ್ಯಂದ ಮತ್ತು ನೇಮಕ ವಿನಿಯಮಾವಳಿಗಳಲ್ಲೂ ವಯಸ್ಸಿನ ಆಧಾರದ ಮೇಲೆ ಆಯ್ಕೆ ನಡೆಸುವ ಅವಕಾಶವಿರುವುದಿಲ್ಲ.

3) ಹೌದು.

ರಾಜ್ಯದಲ್ಲಿ ಸರಬರಾಜು ಆಗುತ್ತಿರುವ ಸೀಮೆಎಣ್ಣೆ ಪ್ರಮಾಣ

242 - ಶ್ರೀ ಎಲ್.ಆರ್. ಶಿವರಾಮೇಗೌಡ (ನೆಲಮಂಗಲ): ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಸರಬರಜಾಗುತ್ತಿರುವ ಸೀಮೆಎಣ್ಣೆ ಪ್ರಮಾಣವೆಷ್ಟು? ಮತ್ತು ಎಷ್ಟು ಪ್ರಮಾಣದ ಅಗತ್ಯವಿದೆ? (ಜಿಲ್ಲಾವಾರು ವಿವರ ಕೊಡುವುದು)

ಆ) ಅಗತ್ಯಕ್ಕಿಂತ ಕಡಿಮೆ ಪ್ರಮಾಣ ಸರಬರಾಜಾಗುವಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು?

ಇ) ನೆಲಮಂಗಲ ತಾಲ್ಲೂಕಿನಲ್ಲಿ ಸೀಮೆಎಣ್ಣೆ ಬೇಡಿಕೆಗಿಂತ ಕಡಿಮೆ ಸರಬರಜಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ, ಈ ಬೇಡಿಕೆಯನ್ನು ಪೂರೈಸಲು ಸರ್ಕಾರವು ಏನಾದರೂ ಕ್ರಮ ತೆಗೆದುಕೊಂಡಿದೆಯೇ?

ಉ) ಸೀಮೆಎಣ್ಣೆ ಮಾರಾಟ ಮಾಡಲು ಹೊಸದಾಗಿ ಪರವಾನಗಿ ಕೊಡುವ ಯೋಚನೆ ಸರ್ಕಾರಕ್ಕೆ ಇದೆಯೇ?

ಶ್ರೀ ಟಿ.ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ) ರಾಜ್ಯಕ್ಕೆ ಕೇಂದ್ರದಿಂದ ತಿಂಗಳಿಗೆ ನವೆಂಬರ್ 91ರಿಂದ 47,513 ಕೆ.ಎಲ್ ಸೀಮೆಎಣ್ಣೆಯನ್ನು ಬಿಡುಗಡೆ ಮಾಡಲಾಗುತ್ತಿದೆ. ರಾಜ್ಯಕ್ಕೆ ಅವಶ್ಯವಿರುವ ಸೀಮೆಎಣ್ಣೆಯ ಪ್ರಮಾಣ 67,000 ಕೆ.ಎಲ್. (ಜಿಲ್ಲೆಗಳ ಬೇಡಿಕೆ ಮತ್ತು ಹಾಲಿ ಹಂಚಿಕೆ ಪ್ರಮಾಣವನ್ನು ಲಗತ್ತಿಸಿದೆ).

ಆ) ಕೇಂದ್ರ ಸರ್ಕಾರವು ರಾಜ್ಯಕ್ಕೆ ಬಿಡುಗಡೆ ಮಾಡುವ ಸೀಮೆಎಣ್ಣೆಯ ಪ್ರಮಾಣವನ್ನು ಹೆಚ್ಚಿಸಬೇಕೆಂತಲೂ ಪದೇ ಪದೇ ಕೇಳಿಕೊಳ್ಳಲಾಗುತ್ತಿದೆ. ಆದರೂ ಪ್ರಮಾಣವನ್ನು ಹೆಚ್ಚಿಸಿರುವುದಿಲ್ಲ, ಇದರ ಬಗ್ಗೆ ಕೇಂದ್ರದೊಂದಿಗೆ ಪತ್ರ ವ್ಯವಹಾರ ನಡೆಯುತ್ತಲೇ ಇದೆ. ಈಗ ವಿತರಣೆಯಾಗುತ್ತಿರುವ ಪ್ರಮಾಣದಲ್ಲೇ ಉರವಲಕ್ಕಾಗಿ ಸೀಮೆಎಣ್ಣೆಯನ್ನು ಸಂಪೂರ್ಣ ಆವಲಂಬಿಸಿರುವ ಕಾರ್ಡುದಾರರಿಗೆ ತಕ್ಕಷ್ಟು ಹೆಚ್ಚಿಗೆ